# ಡಿಸಿಆರ್‌ನಲ್ಲಿ ಹಿಂದಿ ಸಪ್ತಾಹ ಉದ್ಘಾಟನೆ

## ಹಿಂದಿ ಪ್ರಸಾರಕ್ಕೆ ಶ್ರಮಿಸುವುದು ಅಗತ್ಯ : ಕುಸುಮಾ

ಪುತ್ತೂರು: ಇಲ್ಲಿನ ಮೊಟ್ಟೆತ್ತಡ್ಕದಲ್ಲಿನ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ಹಿಂದಿ ಸಪ್ತಾಹದ ಉದ್ಘಾಟನೆ ನಡೆಯಿತು. ಮುಖ್ಯ ಅತಿಥಿಯಾಗಿದ್ದ ಸರಕಾರಿ ಮಹಿಳಾ ಕಾಲೇಜ್‌ನ ಹಿಂದಿ ಪ್ರಾಧ್ಯಾಪಕಿ ಶ್ರೀಮತಿ ಕುಸುಮಾ ವಸಂತರವರು ಉದ್ಘಾಟಿಸಿದರು. ಹಿಂದಿ ಭಾಷೆ ಕೇವಲ ಅಧ್ಯಯನ, ನೌಕರಿ ದೃಷ್ಟಿಯಿಂದಲ್ಲದೇ ತಮ್ಮ ಜೀವನಕ್ಕೆ ಹೇಗೆ ಅದು ಆಧಾರವಾಯಿತು ಹಾಗೂ ಜನಜೀವನಕ್ಕೆ ಹೇಗೆ ಅದು ಅವಶ್ಯವಿದೆ ಎಂದರು. ಸ್ವಾತಂತ್ರ ಹೋರಾಟದ ಸಂದರ್ಭದಲ್ಲಿ ಗಾಂಧೀಜಿ, ವಿನೋಭಾ ಭಾವೆಯಂತಹ ನೇತಾರರು ದಕ್ಷಿಣ ಭಾರತದಲ್ಲಿ ಹಿಂದಿ ಪ್ರಸಾರಕ್ಕೆ ಶ್ರಮಿಸಿದಂತೆ ಇಂದು ನಾವೂ ಪ್ರಯತ್ನಿಸುವ ಅಗತ್ಯವಿದೆ ಎಂದರು.

ಇನ್ನೋರ್ವ ಅತಿಥಿ, ಭಾರತೀಯ ಸ್ಟೇಟ್ ಬ್ಯಾಂಕ್, ಪುತ್ತೂರು ಶಾಖೆಯ ಪ್ರಬಂಧಕರಾದ ಚಿನ್ನಯಾ ಚಾರಿಯವರು ಹಿಂದೀ ಭಾಷೆಯನ್ನು ರಾಷ್ಟ್ರಮಟ್ಟದಲ್ಲಿ ಒಂದು ಪ್ರಭಾವೀ ಸಂಪರ್ಕ ಭಾಷೆಯಾಗಿ ಮತ್ತು ನಮ್ಮನ್ನೆಲ್ಲ ಒಂದು ಗೂಡಿಸುವ ಸೂತ್ರವಾಗಿ ಬೆಳೆಸುವ ಅವಶ್ಯಕತೆ ಇದೆ ಎಂದರು.

ಕಾರ್ಯಕ್ರಮದಲ್ಲಿ, ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ವತಿಯಿಂದ ನಡೆಯುವ ಪರೀಕ್ಷೆಗಳಲ್ಲಿ, ಪುತ್ತೂರು ಕೇಂದ್ರಕ್ಕೆ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ವಿವೇಕಾನಂದ ಕನ್ನಡ ಮಾಧ್ಯಮದ ಅನ್ವಿತ್ ರೈ (ರಾಜ್ಯಕ್ಕೆ ಎರಡನೆ ರ್‍ಯಾಂಕ್), ಸತ್ಯಸಾಯಿ ಅಳಿಕೆಯ ಅಪ್ರಮೇಯ, ಕರ್ನಾಟಕ ಪಬ್ಲಿಕ ಸ್ಕೂಲ್ ಬೆಳ್ಳಾರೆಯ ಪದ್ಮಿನಿ, ಸರಸ್ವತಿ ವಿದ್ಯಾಲಯ ಕನ್ಯಾನದ ರಚನಾ ಹಾಗೂ ಗುರುದೇವ ವಿದ್ಯಾಪೀಠ ಒಡಿಯೂರಿನ ಅನನ್ಯಲಕ್ಷ್ಮಿ ಪುರಸ್ಕಾರ ಸ್ವೀಕರಿಸಿದರು.

ರಾಜಭಾಷಾ ಹಿಂದಿಯ ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ ಈ ವರ್ಷ ವಿಶೇಷವಾಗಿ ನೀಡಲಾದ ಪ್ರಶಸ್ತಿಯನ್ನು ಅಂಚೆ ಇಲಾಖೆ ಪಡೆದುಕೊಂಡಿತು. ಅಂಚೆ ಇಲಾಖೆಗಳ ಹಿರಿಯ ಅಧೀಕ್ಷಕ ಜಗದೀಶ ಪೈ ಈ ಪುರಸ್ಕಾರ ಸ್ವೀಕರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಿಸಿಆರ್ ನ ಪ್ರಭಾರ ನಿರ್ದೇಶಕರಾದ



ಡಾ. ಎಮ್. ಗಂಗಾಧರ ನಾಯಕ್ ಅವರು ರಾಜಭಾಷಾ ಅನುಷ್ಠಾನದಲ್ಲಿ ಪುತ್ತೂರಿನ ಸರ್ಕಾರಿ ಕಾರ್ಯಾಲಯಗಳು ಸಾಕಷ್ಟು ಪ್ರಗತಿ ಸಾಧಿಸಿವೆ, ಇದೇ ಹಾದಿಯಲ್ಲಿ ಮುಂದುವರಿಯಲು ಎಲ್ಲ ಸದಸ್ಯ ಕಾರ್ಯಾಲಯಗಳ ಸಹಕಾರ ಅಗತ್ಯವಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಎಲ್.ಐ.ಸಿ., ಅಂಚೆ ಇಲಾಖೆ, ಆದಾಯ ತೆರಿಗೆ ಇಲಾಖೆ, ಸಿ.ಪಿ. ಸಿ.ಆರ್.ಐ., ವಿಟ್ಲ ಮುಂತಾದ ಸರ್ಕಾರಿ ಕಾರ್ಯಾಲಯಗಳ ಸಿಬಂದಿ ಭಾಗವಹಿಸಿದ್ದರು. ಸಪ್ತಾಹದ ಅಂಗವಾಗಿ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಹಿಂದಿ ನಿಬಂಧ ಲೇಖನ ಸ್ಪರ್ಧೆ ಏರ್ಪಡಿಸಲಾಯಿತು. ಆದಾಯ ತೆರಿಗೆ ಇಲಾಖೆಯ ಲೋಕೇಶ ಕುಮಾರ ಧನ್ಯವಾದ ಸಮರ್ಪಣೆ ಮಾಡಿದರು.